**ಓ.ಎಸ್. ನಂ. 87/2022 ಪಿ.ಡಬ್ಲೂ-1 ಹೆಸರು - ಕೆ.ಎಸ್. ಸಂಗರಾಜು**

**ಸಾಕ್ಷಿಯನ್ನು ದಿನಾಂಕಃ 12/01/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ನಾನು ಸಾಕ್ಷ್ಯಕ್ಕಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ನನಗೆ ತಿಳಿದಿವೆ ಮತ್ತು ಅವು ಸತ್ಯವಾಗಿವೆ. ಪ್ರಮಾಣ ಪತ್ರದಲ್ಲಿ ಇರುವ ರುಜುಗಳು ನನ್ನದೇ ಆಗಿರುತ್ತವೆ.

**ಮುಖ್ಯ ವಿಚಾರಣೆ ಶ್ರೀ. ಹೆಚ್.ಡಿ.ಎಸ್. ವಾದಿ ಪರ ವಕೀಲರಿಂದಃ-**

ದಾವಾ ಸ್ವತ್ತಿನ ಪಹಣಿ ಮತ್ತು ಎಂ.ಆರ್ ಅನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು ನಿಪಿ-2 ಎಂದು ಗುರುತಿಸಲಾಯಿತು. ಹುಲ್ಲಹಳ್ಳಿ ಪೊಲೀಸರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಪ್ರತಿವಾದಿಯು ಪೊಲೀಸರ ಮುಂದೆ ನೀಡಿದ್ದ ಹೇಳಿಕೆಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-4 ಎಂದು ಗುರುತಿಸಲಾಯಿತು. 2 ಕಂದಾಯ ಪಾವತಿ ರಶೀದಿಗಳು, ಪಟ್ಟಾ ಮತ್ತು ರಶೀದಿ ಪುಸ್ತಕಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-5 ರಿಂದ ನಿಪಿ-7 ಎಂದು ಗುರುತಿಸಲಾಯಿತು. ಆರ್.ಆರ್.ಟಿ. ಪ್ರಕರಣ ಸಂಖ್ಯೆ 72/17-18 ರ ಆದೇಶದ ದೃಡೀಕೃತ ಪ್ರತಿ ಮತ್ತು ತಹಶೀಲ್ದಾರ್ ಕಾರ್ಯಾಲಯದ ದಿನಾಂಕ 27.08.2020 ರ ಜ್ಞಾಪನ ಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-8 ಮತ್ತು ನಿಪಿ-9 ಎಂದು ಗುರುತಿಸಲಾಯಿತು.

( ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕರೆಸಲಾಯಿತು ಅವರು ಗೈರು ಹಾಜರು ಇರುತ್ತಾರೆ, ಮತ್ತು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**